
# 16. ಕೆಮ್ಮನೆ ಮೀಸೆವೊತ್ತೆನೇ

– ಪಂಪ

## ಕವಿ – ಕಾವ್ಯ– ಪರಿಚಯ




ಕನ್ನಡದ ಆದಿಕವಿ ಎನಿಸಿಕೊಂಡ ಮಹಾಕವಿ ಪಂಪನು **ಕ್ರಿ.ಶ.ಸುಮಾರು 902**ರಲ್ಲಿ ವೆಂಗಿಮಂಡಲದ **ವೆಂಗಿಪಳು** ಎಂಬ ಅಗ್ರಹಾರದಲ್ಲಿ ಜನಿಸಿದನು.

ಚಾಲುಕ್ಯರ ದೊರೆ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಪಂಪನು **'ವಿಕ್ರಮಾರ್ಜುನ ವಿಜಯ** ಮತ್ತು **ಆದಿ ಪುರಾಣ'** ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ.

ಕನ್ನಡದ ರತ್ನತ್ರಯರಲ್ಲಿ ಒಬ್ಬನಾಗಿದ್ದ ಈತನಿಗೆ **'ಸರಸ್ವತಿ ಮಣಿಹಾರ', 'ಸಂಸಾರ ಸಾರೋದಯ', 'ಕವಿತಾ ಗುಣಾರ್ಣವ'** ಎಂಬ ಬಿರುದುಗಳು ಇದ್ದವು.

**'ಕೆಮ್ಮನೆ ಮೀಸೆವೊತ್ತನೇ'** ಎಂಬ ಈ ಪದ್ಯಭಾಗವನ್ನು ಪಂಪಮಹಾಕವಿ ವಿರಚಿತ **'ವಿಕ್ರಮಾರ್ಜುನ ವಿಜಯಂ'** ಕಾವ್ಯದ ದ್ವಿತೀಯಾಶ್ವಾಸ ದಿಂದ (ಡಿ.ಎಲ್. ನರಸಿಂಹಾಚಾರ್ಯರ ಸಂಪಾದನೆ) ಆಯ್ಕೆ ಮಾಡಲಾಗಿದೆ.

**ಹಿನ್ನಲೆ:** ದ್ರೋಣ ಮತ್ತು ದ್ರುಪದರಿಬ್ಬರೂ ಸಹಪಾಠಿಗಳು. ಯಜ್ಞಸೇನನೆಂಬ ಗುರುವಿನಲ್ಲಿ ವಿದ್ಯಾಭ್ಯಾಸ ಮಾಡಿದರು. ದ್ರುಪದನು ತಾನು ದೊರೆಯಾದಾಗ ತನ್ನ ಬಳಿ ಬಂದರೆ ಸಹಾಯ ಮಾಡುವುದಾಗಿ ದ್ರೋಣನಿಗೆ ಹೇಳಿದನು. ದ್ರೋಣನಿಗೆ ಬಡತನ ದೊರೆಕೊಂಡಿತು. ಈ ವೇಳೆಗೆ ದ್ರುಪದನು ರಾಜನಾಗಿದ್ದನು. ದ್ರುಪದನು ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಆಡಿದ್ದ ಮಾತುಗಳನ್ನು ಜ್ಞಾಪಿಸಿಕೊಂಡು ಸಹಾಯವನ್ನು ನಿರೀಕ್ಷಿಸಿ ದ್ರುಪದನಲ್ಲಿಗೆ ಬಂದನು. ಆದರೆ ದ್ರುಪದನಿಗೆ ಅಧಿಕಾರ ಮದ ಆವರಿಸಿತ್ತು. ದ್ರೋಣ ತನ್ನ ಸಹಪಾಠಿ ಎಂದು ಗುರುತಿಸದಾದನು. ಅವರಿಬ್ಬರಿಗೂ ನಡೆದ ಸಂಭಾಷಣೆಯನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

**ಪದ್ಯಭಾಗ :**

**ವ ॥ ದ್ರೋಣಂ ತನಗೆ ಬಡತನಮಡಸೆ ಅಶ್ವತ್ಥಾಮನನೊಡಗೊಂಡು ನಾಡಂನಾಡಂ ತೊಳಲ್ದು ಪರಶುರಾಮನಲ್ಲಿಗೆ ವಂದಂ ಅಂತು ವಲ್ಕಲಾವೃತಕಟಿತಟನುಮಾಗಿರ್ದ ಜಟಾಕಲಾಪನುಮಾಗಿ ತಪೋವನಕ್ಕೆ ಪೋಪ ಭಾರ್ಗವಂ ದ್ರವ್ಯಾರ್ಥಿಯಾಗಿ ಬಂದ ಕುಂಭಸಂಭವನಂ ಕಂಡು ಕನಕಪಾತ್ರಕ್ಕುಪಾಯಮಿಲ್ಲಪ್ಪುದಱಿಂ ಮೃತ್ಪಾತ್ರದೊಳರ್ಘ್ಯಮೆತ್ತಿ ಪೂಜಿಸಿ–**

**ಬಿಡಿಸಿ ಓದು :**

ವ॥ದ್ರೋಣಂ ತನಗೆ ಬಡತನಮ್ + ಅಡಸೆ ಅಶ್ವತ್ಥಾಮನನ್ + ಒಡಗೊಂಡು ನಾಡಂನಾಡಂ ತೊಟಲ್ದು ಪರಶುರಾಮನ್ + ಅಲ್ಲಿಗೆ ವಂದಂ. ಅಂತು ವಲ್ಕಲ+ಆವೃತ+ಕಟಿತಟನುಮ್ + ಆಗಿರ್ದ ಜಟಾಕಲಾಪನುಮಾಗಿ ತಪೋವನಕ್ಕೆ ಪೋಪ ಭಾರ್ಗವಂ ದ್ರವ್ಯಾರ್ಥಿಯಾಗಿ ಬಂದ ಕುಂಭಸಂಭವನಂ ಕಂಡು ಕನಕಪಾತ್ರಕ್ಕೆ+ಉಪಾಯಮ್+ಇಲ್ಲ+ಅಪ್ಪುದಱಿಂ ಮೃತ್ಪಾತ್ರದೊಳ್ + ಅರ್ಘ್ಯಮ್ + ಎತ್ತಿ ಪೂಜಿಸಿ–

**ಪದಗಳ ಅರ್ಥ :**

ಅಡಸು – ಉಂಟಾಗು, ಅರ್ಘ್ಯ – ಪೂಜ್ಯರಿಗೆ ಕೈ ತೊಳೆಯಲು ನೀಡುವ ನೀರು, ಕನಕಪಾತ್ರ – ಚಿನ್ನದ ಪಾತ್ರೆ, ಮೃತ್ಪಾತ್ರ – ಮಣ್ಣಿನ ಪಾತ್ರೆ, ಜಟಾಕಲಾಪ – ಜಡೆಯ ಸಮೂಹ, ಅರ್ಥಿ–ಬೇಡುವವನು, ಒಡಗೊಂಡು–ಜೊತೆಗೂಡಿ, ತೊಳಲ್ದು–ಅಲೆದಾಡಿ, ಭಾರ್ಗವ–ಪರಶುರಾಮ,

**ಸಾರಾಂಶ:** ದ್ರೋಣನು ತನಗೆ ಬಡತನ ಉಂಟಾಗಲು ಅಶ್ವತ್ಥಾಮನನ್ನೂ ಜೊತೆಯಲ್ಲಿ ಕರೆದುಕೊಂಡು ದೇಶದೇಶಗಳನ್ನೆಲ್ಲ ಅಲೆದಾಡಿ ಪರಶುರಾಮನ ಬಳಿಗೆ ಬಂದನು, ಆಗ ನಾರುಮಡಿಯಿಂದ ಸುತ್ತುವರಿದ ನಡುವುಳ್ಳವನಾಗಿದ್ದ, ಜಟಾ ಸಮೂಹದಿಂದ ಕೂಡಿದವನೂ ಆಗಿದ್ದ, ತಪೋವನಕ್ಕೆ ಹೊರಟಾಗ ಪರಶುರಾಮನು, ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನನ್ನು ಕಂಡು ಚಿನ್ನದ ಪಾತ್ರೆ ಇಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.




**ಚಂಪಕ॥ ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ**
**ದಡಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ**
**ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ**
**ಲ್ಲೊಡಮೆ ಸಮಂತು ಪೇಟವರೊಳಾವುದನೀವುದೊ ಕುಂಭಸಂಭವಂ ॥ 1 ॥**

**ಬಿಡಿಸಿ ಓದು:**

ಚಂ ॥ ಒಡವೆಯನ್ + ಅರ್ಥಿಗೆ + ಇತ್ತೆನ್+ಅವನೀತಳಮಂ ಗುರುಗೆ+ಇತ್ತೆನ್+ ಈಗಳ್ ಒಂದು + ಅಡೆಕೆಯುಮ್ + ಇಲ್ಲ ಕೈಯೊಳ್ + ಎರೆದಂ ಶ್ರುತ + ಪಾರಗನ್+ ಎಂತು ಸಂತಸಂ ಬಡಿಸುವೆನ್ + ಇನ್ನು + ಇದೊಂದು ಧನು + ಇರ್ದುದು ದಿವ್ಯಶರಾಳಿ+ ಇರ್ದುದು + ಇಲ್ಲ ಒಡಮೆ ಸಮಂತು ಪೇಟ್ + ಅವರೊಳ್ + ಆವುದನ್ + ಈವುದೊ ಕುಂಭಸಂಭವಂ

**ಪದಗಳ ಅರ್ಥ :**

ಅರ್ಥಿ – ಬೇಡುವವನು, ಅವನೀತಳ – ಭೂಮಂಡಲ ಎರೆದಂ – ಬೇಡುವವನು, ದಿವ್ಯಶರಾಳಿ – ಶ್ರೇಷ್ಠ ಬಾಣಗಳ ಸಮೂಹ, ಸಮಂತು– ಚೆನ್ನಾಗಿ, ಶ್ರುತಪಾರಗ– ಶಾಸ್ತ್ರಪಾರಂಗತ

**ಸಾರಾಂಶ :** ನಂತರ ಪರಶುರಾಮನು "ಸಂಪತ್ತನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ (ಕಶ್ಯಪಮುನಿ) ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಕೆಯೂ ಇಲ್ಲ. ಬೇಡುವವನಾದರೋ ವೇದಶಾಸ್ತ್ರ ಪಾರಂಗತನು. ಹೇಗೆ ಅವನನ್ನು ಸಂತೋಷಪಡಿಸಲಿ?" ಎಂದು ಮನದಲ್ಲಿ ಯೋಚಿಸುತ್ತಾ "ಎಲೈ ದ್ರೋಣನೇ, ಈಗ ಇದೊಂದು ಬಿಲ್ಲು ಇದೆ. ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು" ಎಂದು ಹೇಳಿದನು.

**ವಚನ ॥ ಎಂಬುದುಂ ದ್ರೋಣನೆನಗೆ ವಿದ್ಯಾಧನಮೆ ಧನಮಪ್ಪುದಱಿಂ ದಿವ್ಯಾಸ್ತ್ರಂಗಳಂ ದಯೆಗೆಯ್ವುದೆನೆ ವಾರಣವಾಯವ್ಯಾಗ್ನೇಯಪೌರಂದರಾದಿಪ್ರಧಾನಾಸ್ತ್ರಂಗಳಂ ಕುಡೆ ಕೊಂಡು ಪರಶುರಾಮನಂ ಬೀೞ್ಕೊಂಡು ತನ್ನೊಡನಾಡಿಯಪ್ಪ ಕೆಳೆಯಂ ದ್ರುಪದಂ ಛತ್ರಾವತಿಯೊಳರಸುಗೆಯ್ದಪನೆಂದು ಕೇಳ್ದಾ ಪೊೞಲ್ಗೆವಂದು ದ್ರುಪದನರಮನೆಯ ಬಾಗಿಲೊಳ್ ನಿಂದು ಪಡಿಯಱನಂ ಕರೆದು ನಿಮ್ಮೊಡನಾಡಿದ ಕೆಳೆಯಂ ದ್ರೋಣನೆಂಬ ಪಾರ್ವ ಬಂದನೆಂದು ನಿಮ್ಮರಸಂಗಱಿಯೆ ಪೇೞೆಂಬುದುಮಾತನಾ ಮಾೞ್ಕೆಯೊಳೆ ಬಂದಱಿಪುವುದುಂ ದ್ರುಪದಂ ರಾಜ್ಯಮದಿರಾಮದೋನ್ಮತ್ತನುಂ ಗರ್ವಗ್ರಹವ್ಯಗ್ರಚಿತ್ತನುಮಾಗಿ ಮೇಗಿಲ್ಲದೆ–**

**ಬಿಡಿಸಿ ಓದು :**

ವ ॥ ಎಂಬುದುಂ ದ್ರೋಣನ್ + ಎನಗೆ ವಿದ್ಯಾಧನಮೆ ಧನಮ್ + ಅಪ್ಪುದಱಿಂ ದಿವ್ಯಾಸ್ತ್ರಂಗಳಂ ದಯೆಗೆಯ್ವುದು + ಎನೆ ವಾರಣ + ವಾಯವ್ಯ + ಆಗ್ನೇಯ ಪೌರಂದರ + ಆದಿ + ಪ್ರಧಾನ + ಅಸ್ತ್ರಂಗಳಂ ಕುಡೆ ಕೊಂಡು ಪರಶುರಾಮನನ್ + ಬೀೞ್ಕೊಂಡು ತನ್ನ + ಒಡನಾಡಿಯಪ್ಪ ಕೆಳೆಯಂ ದ್ರುಪದಂ ಛತ್ರಾವತಿಯೊಳ್ + ಅರಸು + ಗೆಯ್ದಪನ್ + ಎಂದು ಕೇಳ್ದು + ಆ ಪೊೞಲ್ಗೆ + ವಂದು ದ್ರುಪದನ + ಅರಮನೆಯ ಬಾಗಿಲೊಳ್ + ನಿಂದು ಪಡಿಯಱನಂ ಕರೆದು ನಿಮ್ಮೊಡನೆ + ಆಡಿದ ಕೆಳೆಯಂ ದ್ರೋಣನ್ + ಎಂಬ ಪಾರ್ವರ್ ಬಂದನ್ + ಎಂದು ನಿಮ್ಮ + ಅರಸಂಗೆ + ಅಱಿಯೆ ಪೇೞ್ + ಎಂಬುದುಮ್ + ಆತನ್ + ಮಾೞ್ಕೆಯೊಳೆ ಬಂದು + ಅಱಿಪುವುದುಂ ದ್ರುಪದಂ ರಾಜ್ಯ ಮದಿರಾಮದೋನ್ಮತ್ತನುಂ ಗರ್ವಗ್ರಹವ್ಯಗ್ರಚಿತ್ತನುಮ್ + ಆಗಿ ಮೇಗಿಲ್ಲದೆ

**ಪದಗಳ ಅರ್ಥ :**

ಪಡಿಯರ – ದ್ವಾರಪಾಲಕ, ಸೇವಕ (ಪ್ರತಿಹಾರಿ(ತ್ಸ)–ಪಡಿಯರಿ(ತ್ಭ)) ಮಾಳ್ಕಿಯೊಳ್–ರೀತಿಯಲ್ಲಿ, ಮೇಗಿಲ್ಲದೆ–ಉತ್ತಮತನವಿಲ್ಲದೆ, ಪೌರಂದರ–ಇಂದ್ರ, ಮದಿರಾ– ಸುರಾಪಾನ

**ಸಾರಾಂಶ:** ಎಂಬುದಾಗಿ ಹೇಳಲು ದ್ರೋಣನು ನನಗೆ ವಿದ್ಯಾಧನವೇ ಧನವು ಆದುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸುವುದು ಎನ್ನಲು, ವಾರುಣ, ವಾಯವ್ಯ, ಆಗ್ನೇಯ, ಇಂದ್ರಾಸ್ತ್ರವೇ ಮೊದಲಾದ ಪ್ರಧಾನವಾದ ಅಸ್ತ್ರಗಳನ್ನು ಕೊಡಲು, ಅದನ್ನು ತೆಗೆದುಕೊಂಡು, ಪರಶುರಾಮನಿಂದ ಬೀಳ್ಕೊಂಡು, ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು "ನಿಮ್ಮ ಜೊತೆಯಲ್ಲಾಟವಾಡಿದ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು" ಎಂದು ಹೇಳಲು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಆಗ ದ್ರುಪದನು ರಾಜ್ಯ ಎಂಬ ಸುರಪಾನದಿಂದ ಸೊಕ್ಕಿದವನೂ ಅಹಂಕಾರವೆಂಬ ಗ್ರಹದಿಂದ ಪೀಡಿತನಾದ ಮನಸ್ಸುಳ್ಳವನೂ ಆಗಿ ಒಳ್ಳೆಯತನವಿಲ್ಲದೇ ಹೀಗೆ ನುಡಿದನು.

**ಕಂದ ॥ ಅಂತೆಂಬನಾರ್ಗೆ ಪಿರಿದುಂ**
**ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ**
**ೞೆಂತೆನಗೆ ಕೆಳೆಯನೇ ನೂಂ**
**ಕಂತಪ್ಪನನಱಿಯೆನೆಂದು ಸಭೆಯೊಳ್ ನುಡಿದಂ ॥2॥**

**ಬಿಡಿಸಿ ಓದು:**

ಕಂ ॥ ಅಂತು + ಎಂಬನ್ + ಆರ್ಗೆ ಪಿರಿದುಂ ಭ್ರಾಂತು ದಲೇಂ ದ್ರೋಣನ್ + ಎಂಬನ್ + ಏಂ ಪಾರ್ವನೆ ಪೇೞ್ + ಎಂತು + ಎನಗೆ ಕಳೆಯನೇ + ನೂಂಕು + ಅಂತಪ್ಪನನ್ + ಅಱಿಯೆನ್ + ಎಂದು ಸಭೆಯೊಳ್ ನುಡಿದಂ

**ಅರ್ಥ :** ನೂಂಕು–ನೂಕು

**ಸಾರಾಂಶ:** ದ್ರುಪದನು ದ್ವಾರಪಾಲಕನೊಡನೆ "ಹಾಗೆ ಹೇಳುತ್ತಿರುವ ಅವನು ಯಾರು? ಇದು ಹಿರಿದಾದ ಭ್ರಮೆಯಲ್ಲವೇ? ದ್ರೋಣ ಎಂಬುವವನು ಬ್ರಾಹ್ಮಣನೇ? ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು. ಅವನನ್ನು ಹೊರಗೆ ನೂಕು" ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು.

**ವ ॥ ಅಂತು ನುಡಿದುದಂ ಪಡಿಯಱಂ ಬಂದಾಮಾೞ್ಕೆಯೊಳಱಿಪೆ ದ್ರೋಣನೊತ್ತಂಬರದಿಂದೊಳಗಂ ಪೊಕ್ಕು ದ್ರುಪದನಂ ಕಂಡು–**

**ಬಿಡಿಸಿ ಓದು :**

ವ ॥ ಅಂತು ನುಡಿದುದಂ ಪಡಿಯಱಂ ಬಂದು + ಆಮಾೞ್ಕೆಯೊಳ್ + ಅಱಿಪೆ ದ್ರೋಣನ್ + ಒತ್ತಂಬರದಿಂದ + ಒಳಗಂ ಪೊಕ್ಕು ದ್ರುಪದನಂ ಕಂಡು–ಪಡಿಯರ–ದ್ವಾರಪಾಲಕ(ಸೇವಕ), ಒತ್ತಂಬರದಿಂದ–ಒತ್ತಾಯದಿಂದ

**ಸಾರಾಂಶ:** ದ್ರುಪದನು ಹೀಗೆ ಹೇಳಿದುದನ್ನು ದ್ವಾರಪಾಲಕನು ಬಂದು ಆ ರೀತಿಯಲ್ಲಿಯೇ ತಿಳಿಸಲು ದ್ರೋಣನು ಒತ್ತಾಯದಿಂದ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ.

**ಚಂ॥ ಅಱಿಯಿರೆ ನೀಮುಮಾಮುಮೊಡನೋದಿದೆವೆಂಬುದನಣ್ಣ ನಿನ್ನ ನಾ**
**ನಱಿಯೆನದೆಲ್ಲಿ ಕಂಡೆಯೊ ಮಹೀಪತಿಗಂ ದ್ವಿಜವಂಶಜಂಗಮೇ**
**ತಱ ಕೆಳೆಯಿಂತು ನಾಣಿಲಿಗರಪ್ಪರೆ ಮಾನಸರೆಂಬ ಮಾತುಗಳ್**
**ನೆೞಿಗೊಳೆ ಕುಂಭಸಂಭವನನಾ ದ್ರುಪದಂ ಕಡುಸಿಗ್ಗು ಮಾಡಿದಂ ॥3॥**

**ಬಿಡಿಸಿ ಓದು:**

ಚಂ॥ ಅಱಿಯಿರೆ ನೀಮುಮ್ + ಆಮುಮ್ + ಒಡನೆ + ಓದಿದೆವು + ಎಂಬುದನ್ +ಅಣ್ಣ ನಿನ್ನನ್ + ಆನ್ + ಅಱಿಯೆನ್ + ಅದೆಲ್ಲಿ ಕಂಡೆಯೊ ಮಹೀಪತಿಗಂ ದ್ವಿಜವಂಶಜಂಗಮ್ + ಏತಱ ಕೆಳೆ + ಇಂತು ನಾಣಿಲಿಗರ್ + ಅಪ್ಪರೆ ಮಾನಸರ್ + ಎಂಬ ಮಾತುಗಳ್ + ನೆೞಿಗೊಳೆ ಕುಂಭಸಂಭವನನ್ + ಆ ದ್ರುಪದಂ ಕಡುಸಿಗ್ಗು ಮಾಡಿದಂ

**ಅರ್ಥ:** ಮಹಿಪತಿ – ರಾಜ, ದ್ವಿಜವಂಶಜಂ – ಬ್ರಾಹಣ ವಂಶದವನು, ನಾಣಿಲಿ – ನಾಚಿಕೆ ಇಲ್ಲದವನು, ಕಡುಸಿಗ್ಗು – ತೀವ್ರ ನಾಚಿಕೆ

**ಸಾರಾಂಶ**



ದ್ರೋಣನು ದ್ರುಪದನನ್ನು ಕುರಿತು "ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದಿಲ್ಲವೇ?" ಎಂದಾಗ ದ್ರುಪದನು "ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲದವರಾಗುತ್ತಾರೆಯೇ?" ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು.

**ವ ॥ ಅಂತು ಮಾಡಿದುದುಮಲ್ಲದೀ ನಾಣಿಲಿ ಪಾರ್ವನನೆೞೆದು ಕಳೆಯಿಮೆಂಬುದುಂ**
**ದ್ರೋಣನಿಂತೆಂದಂ–**

**ಬಿಡಿಸಿ ಓದು :**

ವ ॥ ಅಂತು ಮಾಡಿದುದುಮ್ + ಅಲ್ಲದೆ + ಈ ನಾಣಿಲಿ ಪಾರ್ವನನ್ + ಎೞೆದು ಕಳೆಯಿಮ್ + ಎಂಬುದುಂ ದ್ರೋಣನ್ + ಇಂತೆಂದಂ

**ಪದಗಳ ಅರ್ಥ :** ನಾಣಿಲಿ–ನಾಚಿಕೆ ಇಲ್ಲದವ, ಎೞೆದು ಕಳೆಯಿಮ್– ಹೊರಕ್ಕೆ ತಳ್ಳಿರಿ

**ಸಾರಾಂಶ:** ಹಾಗೆ ಮಾಡಿದುದು ಅಲ್ಲದೆ "ಈ ನಾಚಿಕೆಗೆಟ್ಟ ಬ್ರಾಹ್ಮಣನನ್ನು ಎಳೆದು ಹಾಕಿರಿ" ಎಂದನು. ಆಗ ದ್ರೋಣನು ಹೀಗೆ ಹೇಳಿದನು.

**ಚಂಪಕ ॥ ನುಡಿ ತಡವಪ್ಪುದೊಂದು ಮೊಗದೊಳ್ ಮಱುಕಂ ದೊರೆಕೊಳ್ವುದೊಂದು ನಾ**
**ಣ್ಗೆಡೆಗುಡದಿರ್ಪುದೊಂದು ನುಡಿಗಳ್ ಮೊೞೆಯಂ ಮಱೆಯಿಪ್ಪುದೊಂದು ಕ**
**ಳ್ಗುಡಿದವರಂದಮಿಂತು ಸಿರಿ ಸಾರ್ತರೆ ಸಾರ್ವುದದರ್ಕೆ ಸಂದೆಯಂ**
**ಬಡದೆ ಜಲಕ್ಕನೀಗಳಱೆದೆಂ ಸಿರಿ ಕಳ್ಗೊಡವುಟ್ಟಿತೆಂಬುದಂ ॥4॥**

**ಬಿಡಿಸಿ ಓದು:**

ಚಂ ॥ ನುಡಿ ತಡವಪ್ಪುದು + ಒಂದು ಮೊಗದೊಳ್ ಮಱುಕಂ ದೊರೆಕೊಳ್ವುದು + ಒಂದು ನಾಣ್ಗೆ + ಎಡೆಗುಡದೆ + ಇರ್ಪುದು + ಒಂದು ನುಡಿಗಳ್ ಮೊೞೆಯಂ ಮಱೆಯಿಪ್ಪುದು + ಒಂದು ಕಳ್ + ಕುಡಿದವರ್ + ಅಂದಮ್ + ಇಂತು ಸಿರಿ ಸಾರ್ತರೆ ಸಾರ್ವುದು + ಅದರ್ಕೆ ಸಂದೆಯಂ ಬಡದೆ ಜಲಕ್ಕನೆ + ಈಗಳ್ + ಅಱೆದೆಂ ಸಿರಿ ಕಳ್ಗೊಡವುಟ್ಟಿತೆಂಬುದಂ

**ಪದಗಳ ಅರ್ಥ:** ತಡವಪ್ಪದು– ತೊದಲುವುದು, ಮಱುಕಂ–ವಕ್ರಚೇಷ್ಟೆ, ಸಾರ್ತರೆ–ಒದಗಿ ಬರಲು, ಸಾರ್ವುದು–ಬರುವುದು, ಸಂದೆಯಂ(ತ್ಭ)– ಸಂದೇಹ(ತ್ಸ), ಜಲಕ್ಕನೆ–ಸ್ಪಷ್ಟವಾಗಿ, ಕಳ್ಗುಡಿದವರಂದಮ್– ಮದ್ಯಕುಡಿದವರ ರೀತಿ

**ಸಾರಾಂಶ:** ದ್ರೋಣನು "ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು; ಆದುದರಿಂದ ಸಂದೇಹ ಪಡದೆ ಸ್ಪಷ್ಟವಾಗಿ ಐಶ್ವರ್ಯವು (ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ತಿಳಿದೆನು" ಎಂದು ಹೇಳಿದನು.

(ಸಮುದ್ರ ಮಂಥನದ ಸಮಯದಲ್ಲಿ ಹುಟ್ಟಿದ ವಸ್ತುಗಳು ವಿಷ, ಮದ್ಯ, ಲಕ್ಷ್ಮಿ)

ವ ॥ ಎಂದು ಸೈರಿಸದೆ– ಎಂದು ಸಹಿಸದೆ

**ಚಂಪಕ ॥ ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ**
**ದಳವೊಡನೋದಿದೊಂದು ಬೆಱಗಿಂಗೆ ಕೊಲಲ್ಕೆನಗಾಗದೀ ಸಭಾ**
**ವಳಯದೊಳೆನ್ನನೇೞಿಸಿದ ನಿನ್ನನನಾಕುಳಮೆನ್ನ ಚಟ್ಟರಿಂ**
**ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ ॥5॥**

**ಬಿಡಿಸಿ ಓದು:** ವ ॥ ಎಂದು ಸೈರಿಸದೆ–

ಚಂ ॥ ಖಳನೊಳವಿಂಗೆ ಕುಪ್ಪೆ ವರಮ್ + ಎಂಬವೊಲ್ + ಆಂಬರಮ್ + ಉಂಟೆ ನಿನ್ನದೊಂದು + ಅಳವು + ಒಡನೆ + ಓದಿದ + ಒಂದು ಬೆಱಗಿಂಗ ಕೊಲಲ್ಕೆ + ಎನಗೆ +ಆಗದೆ + ಈ ಸಭಾವಳಯದೊಳ್ + ಎನ್ನನ್ + ಏೞಿಸಿದ ನಿನ್ನನ್ + ಅನಾಕುಳಮ್ + ಎನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ

**ಪದಗಳ ಅರ್ಥ :** ಖಳ–ದುಷ್ಟ, ನೊಳವಿಂಗೆ– ನೊಣಕ್ಕೆ, ವರಂ–ಶ್ರೇಷ್ಠ, ಕುಪ್ಪೆ–ಕಸದತಿಪ್ಪೆ, ಅಳವು –ಪರಾಕ್ರಮ, ಆಂಬರಂ–ನನ್ನವರೆಗೂ, ಬೆಱಗಿಂಗೆ–ಉತ್ಸಾಹಕ್ಕೆ, ಅನಾಕುಳಮ್–ನಿರಾಯಾಸವಾಗಿ ಚಟ್ಟರಿಂ–ಶಿಷ್ಯರಿಂದ, ಕೊಲಲ್ಕೆ– ಕೊಲ್ಲುವುದಕ್ಕೆ, ತಳವೆಳಗಾಗೆ–ಗಾಬರಿಯಾಗುವಂತೆ, ಏೞಿಸಿದ– ತಿರಸ್ಕರಿಸಿದ.

**ಸಾರಾಂಶ:** ದ್ರೋಣನು ದ್ರುಪದನನ್ನು ಕುರಿತು "ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದೆವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುನೇ (ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?)" ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

## ಅಭ್ಯಾಸ ಪ್ರಶ್ನೋತ್ತರಗಳು

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು?**

**ಉತ್ತರ:** ದ್ರೋಣನು ಪರಶುರಾಮರಲ್ಲಿಗೆ ದ್ರವ್ಯರ್ಥಿಯಾಗಿ ಬಂದನು.

**2. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?**

**ಉತ್ತರ:** ದ್ರೋಣನು **ಅಶ್ವತ್ಥಾಮನೊಡನೆ** ಪರಶುರಾಮನ ಬಳಿಗೆ ಬಂದನು.

**3. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?**

**ಉತ್ತರ:** ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ವಾರುಣ, ವಾಯುವ್ಯ, ಆಗ್ನೇಯ, ಇಂದ್ರಾಸ್ತ್ರಗಳಾಗಿವೆ.

**4. ದ್ರುಪದನು ಪಡಿಯಜಿನಿಗೆ ಏನೆಂದು ಹೇಳಿ ಕಳುಹಿಸಿದನು?**

**ಉತ್ತರ:** ದ್ರುಪದನು ಪಡಿಯಜಿನಿಗೆ ದ್ರೋಣನು ಯಾರೆಂದು ನಾನು. ತಿಳಿಯನೆ ಅವನನ್ನು ಹೊರಗೆ ತಳ್ಳು ಎಂದು ಹೇಳಿ ಕಳುಹಿಸಿದನು.

## ಹೆಚ್ಚುವರಿ ಪ್ರಶ್ನೋತ್ತರಗಳು

**5. ಪರುಶುರಾಮರು ಭೂಮಿಯನ್ನು ಯಾರಿಗೆ ಕೊಟ್ಟಿದ್ದರು?**

**ಉತ್ತರ:** ಪರುಶುರಾಮರು ಭೂಮಿಯನ್ನು ಗುರುವಿಗೆ ಕೊಟ್ಟಿದ್ದರು.

**6. ಕುಂಭಸಂಭವ ಎಂದರೆ ಯಾರು?**

**ಉತ್ತರ:** ಕುಂಭಸಂಭವ ಎಂದರೆ ದ್ರೋಣಚಾರ್ಯರು.

**7. ದ್ರೋಣನಿಗೆ ಯಾವುದು ಧನವಾಗಿತ್ತು?**

**ಉತ್ತರ:** ದ್ರೋಣನಿಗೆ ವಿದ್ಯೆಯೇ ಧನವಾಗಿತ್ತು.

**8. ದ್ರುಪದನು ಎಲ್ಲಿ ರಾಜ್ಯಭಾರ ಮಾಡುತ್ತಿದ್ದನು?**

**ಉತ್ತರ:** ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನು.

**9. ಸಿರಿ ಯಾವುದರೊಡನೆ ಹುಟ್ಟಿತು?**

**ಉತ್ತರ:** ಸಿರಿ ಕಳ್ಳಿನೊಡನೆ ಹುಟ್ಟಿತು.

**10. ನೊಣಕ್ಕೆ ಯಾವುದು ಶ್ರೇಷ್ಠ?**

**ಉತ್ತರ:** ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠ.

**11. ಪರುಶುರಾಮರು ದ್ರೋಣರಿಗೆ ಯಾವುದರಲ್ಲಿ ಅರ್ಘ್ಯವನ್ನು ಕೊಟ್ಟರು ?**

**ಉತ್ತರ:** ಪರುಶುರಾಮರು ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟರು.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?**

**ಉತ್ತರ:** ಪರುಶುರಾಮನು ಒಡವೆಗಳನ್ನೆಲ್ಲ ಬೇಡಿದವರಿಗೆ ಕೊಟ್ಟಿದ್ದನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟಿದ್ದನು. ಅವನಲ್ಲಿ ಒಂದಡಕೆಯೂ ಇರಲಿಲ್ಲ. ಕನಕಪಾತ್ರೆ ಇಲ್ಲದಿರುವುದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟನು.

**2. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?**

**ಉತ್ತರ:** ದ್ರುಪದನು "ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲವರಾಗು ತ್ತಾರೆಯೇ" ಎಂಬ ಮಾತುಗಳನ್ನಾಡಿದನು.

**3. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?**

**ಉತ್ತರ:** ಎಲೈ ದುಷ್ಟನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು ಎನ್ನುವ ಹಾಗೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೆ? ಜೊತೆಯಲ್ಲಿ ಓದಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನಿರಾಯಾಸವಾಗಿ, ಗಾಬರಿಯಾಗುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೇ ? ಎಂಬುದು ಪ್ರತ್ಯುತ್ತರವಾಗಿದೆ.

## ಹೆಚ್ಚುವರಿ ಪ್ರಶ್ನೋತ್ತರಗಳು

**4. ದ್ರವ್ಯಾರ್ಥಿಯಾಗಿ ಬಂದ ದ್ರೋಣನಿಗೆ ಪರಶುರಾಮರು ಹೇಗೆ ಸತ್ಕರಿಸಿದರು ?**

**ಉತ್ತರ:** ದ್ರವ್ಯಾರ್ಥಿಯಾಗಿ ಬಂದ ದ್ರೋಣನಿಗೆ ಪರಶುರಾಮರು ದ್ರೋಣನನ್ನು ಕಂಡು ಚಿನ್ನದ ಪಾತ್ರೆ ಇಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟು ಪೂಜಿಸಿದನು. ನಂತರ ವಾರುಣ, ವಾಯವ್ಯ, ಆಗ್ನೇಯ, ಐಂದ್ರಿಯಾ ಮೊದಲಾದ ಪ್ರಧಾನವಾದ ದಿವ್ಯಾಸ್ತ್ರಗಳನ್ನು ಕೊಟ್ಟು ಸತ್ಕರಿಸಿದರು.

**5. ಐಶ್ವರ್ಯ ಬರಲು ಮನುಷ್ಯರು ಯಾವ ರೀತಿ ವರ್ತಿಸುತ್ತಾರೆಂದು ದ್ರೋಣಚಾರ್ಯರು ದ್ರುಪದನಿಗೆ ಹೇಳಿದರು ?**

**ಉತ್ತರ:** ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು ಎಂದು ದ್ರೋಣಚಾರ್ಯರು ದ್ರುಪದನಿಗೆ ಹೇಳಿದರು

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**1. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?**

**ಉತ್ತರ:** ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು "ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು" ಎಂದು ಹೇಳಲು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು.ಅವನನ್ನು ಹೊರಗೆ ನೂಕು" ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು. ಆಗ ದ್ರೋಣನು ಒತ್ತಂಬರದಿಂದ ಅರಮನೆ ಪ್ರವೇಶಿಸಿ ದ್ರುಪದನನ್ನು ಕುರಿತು "ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದಿಲ್ಲವೇ?" ಎಂದಾಗ ದ್ರುಪದನು "ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲವರಾಗು ತ್ತಾರೆಯೇ?" ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು. ಆಗ ದ್ರೋಣನು "ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ. ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗು ವುವು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು; ಆದುದರಿಂದ ಸಂದೇಹ ಪಡದೆ ಸ್ಪಷ್ಟವಾಗಿ ಐಶ್ವರ್ಯವು (ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ತಿಳಿದೆನು" ಎಂದು ಹೇಳಿದನು.

ಮುಂದವರೆದು ದ್ರೋಣನು ದ್ರುಪದನನ್ನು ಕುರಿತು "ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದೆವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುನೇ (ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?)" ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

**2. ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?**

**ಉತ್ತರ:** ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು"ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು" ಎಂದು ಹೇಳಲು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು.ಅವನನ್ನು ಹೊರಗೆ ನೂಕು" ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು.

ಆಗ ದ್ರೋಣನು ಒತ್ತಂಬರದಿಂದ ಅರಮನೆ ಪ್ರವೇಶಿಸಿ ದ್ರುಪದನನ್ನು ಕುರಿತು "ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದಿಲ್ಲವೇ?" ಎಂದಾಗ ದ್ರುಪದನು "ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲವರಾಗುತ್ತಾರೆಯೇ?"ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು. ಆಗ ದ್ರೋಣನು "ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ. ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು; ಆದುದರಿಂದ ಸಂದೇಹ ಪಡದೆ ಸ್ಪಷ್ಟವಾಗಿ ಐಶ್ವರ್ಯವು (ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ತಿಳಿದೆನು" ಎಂದು ಹೇಳಿದನು.ಮುಂದವರೆದು ದ್ರೋಣನು ದ್ರುಪದನನ್ನು ಕುರಿತು "ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠ ವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದಿವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುನೇ (ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?)" ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**1. "ಈಗಲೊಂದಡಕೆಯುಮಿಲ್ಲ ಕೈಯೊಳ್"**

**ಆಯ್ಕೆ :** ಈ ವಾಕ್ಯವನ್ನು **'ಮಹಾಕವಿ ಪಂಪ'** ಬರೆದ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತೆನೇ '** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶ ದೇಶಗಳಲೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದು ಸಹಾಯ ಯಾಚಿಸಿದಾಗ ಪರಶುರಾಮನು "ನನ್ನ ಆಸ್ತಿಯನ್ನು ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ ಕೊಟ್ಟೆನು. **"ಈಗಲೊಂದಡಕೆಯುಮಿಲ್ಲ ಕೈಯೊಳ್" (**ಈಗ ಒಂದು ಅಡಕೆಯೂ ಇಲ್ಲ ನನ್ನ ಕೈಯಲ್ಲಿ) ಬೇಡುವವನಾದರೋ ವೇದಶಾಸ್ತ್ರ ಪಾರಂಗತನು. ಹೇಗೆ ಅವನನ್ನು ಸಂತೋಷಪಡಿಸಲಿ? ಎಂದು ಮನದಲ್ಲಿ ಯೋಚಿಸಿದ ಸಂದರ್ಭವಾಗಿದೆ.

**ಸ್ವಾರಸ್ಯ:** ಪರುಶುರಾಮನ ದಾನಗುಣದಿಂದಾಗಿ ಆತನ ಬಳಿ ಯಾವುದೆ ಸಂಪತ್ತು ಉಳಿದಿರಲಿಲ್ಲ ಎಂಬುದನ್ನು ಈ **'ಕೈಯೊಳೊಂದಡಕೆಯುಂ ಇಲ್ಲ'** ಎಂಬ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಅರ್ಥೈಸಿಕೊಳ್ಳಬಹುದಾಗಿದೆ.

**2. "ವಿದ್ಯಾಧನಮೆ ಧನಮಪ್ಪುದು"**

**ಆಯ್ಕೆ :** ಈ ವಾಕ್ಯವನ್ನು **'ಮಹಾಕವಿ ಪಂಪ'** ಬರೆದ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತೆನೇ '** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ದ್ರೋಣನು ಪರಶುರಾಮನ ಬಳಿಗೆ ಬಂದು ಸಹಾಯ ಯಾಚಿಸಿದಾಗ ಪರಶುರಾಮನು ನನ್ನ ಆಸ್ತಿಯನ್ನು ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ(ಕಶ್ಯಪ ಮುನಿ)ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಕೆಯೂ ಇಲ್ಲ. ಬೇಡುವವನಾದರೋ ವೇದಶಾಸ್ತ್ರ ಪಾರಂಗತನು. ಹೇಗೆ ಅವನನ್ನು ಸಂತೋಷಪಡಿಸಲಿ? ಎಂದು ಮನದಲ್ಲಿ ಯೋಚಿಸಿ "ಎಲೈ ದ್ರೋಣನೇ, ಈಗ ಇದೊಂದು ಬಿಲ್ಲು ಇದೆ. ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು" ಎಂದು ಹೇಳಿದಾಗ ದ್ರೋಣನು **"ವಿದ್ಯಾಧನಮೆ ಧನಮಪ್ಪುದು"** (ನನಗೆ ವಿದ್ಯಾಧನವೇ ಧನವಾಗಿರುವುದರಿಂದ) ಆದುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು" ಎಂದು ಕೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:** ವಿದ್ಯಾಧನವೇ ನಿಜವಾದ ಸಂಪತ್ತು ಎಂದು ಹೇಳುವ ಮೂಲಕ ದ್ರೋಣನು ವಿದ್ಯೆಯ ಮಹತ್ವವನ್ನು ತಿಳಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

**3. "ಎಂತು ನಾಣಿಲಿಗರಪ್ಪರೆ ಮಾನಸರ್"**
**ಆಯ್ಕೆ :** ಈ ವಾಕ್ಯವನ್ನು **'ಮಹಾಕವಿ ಪಂಪ'** ಬರೆದ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತೆನೇ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ದ್ರೋಣನು ದ್ರುಪದನ ಬಳಿಗೆ ಹೋಗಿ " ಅಣ್ಣಾನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ " ಎನ್ನಲು ದ್ರುಪದನು "ನಿನ್ನನ್ನು ನಾನು ತಿಳಿಯೆನು. ನೀನು ಅದೆಲ್ಲಿ ನನ್ನನ್ನು ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? **"ಎಂತು ನಾಣಿಲಿಗರಪ್ಪರೆ ಮಾನಸರ್"** (ಹೀಗೆ ಮನುಷ್ಯರಾದವರು ನಾಚಿಕೆಗೆಟ್ಟವರಾಗುತ್ತಾರೆಯೇ?) ಎಂಬ ಮಾತುಗಳಿಂದ ದ್ರೋಣನಿಗೆ ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದ ಸಂದರ್ಭವಾಗಿದೆ.

**ಸ್ವಾರಸ್ಯ :** ತನ್ನ ಸಹಪಾಠಿಯಾಗಿದ್ದ ಆತ್ಮೀಯ ಸ್ನೇಹಿತ ಒಬ್ಬ ಬಡವನೆಂಬ ಕಾರಣಕ್ಕೆ ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರಾಗುತ್ತಾರೆಯೇ? ಎಂದು ಹೇಳುವ ದೃಪದನ ಅಹಂಕಾರದ ಮಾತು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**4. "ಜಲಕ್ಕನೀಗಳಚಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ"**
**ಆಯ್ಕೆ:** ಈ ವಾಕ್ಯವನ್ನು **'ಮಹಾಕವಿ ಪಂಪ'** ಬರೆದ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತೆನೇ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ

**ಸಂದರ್ಭ :** ದ್ರೋಣನು ದ್ರುಪದನ ಬಳಿಗೆ ಸಹಾಯ ಯಾಚಿಸಿ ಹೋದಾಗ ದ್ರುಪದನು "ನಿನ್ನನ್ನು ನಾನು ತಿಳಿಯೆನು. ನೀನು ಅದೆಲ್ಲಿ ನನ್ನನ್ನು ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಗೆಟ್ಟವರಾಗುತ್ತಾರೆಯೇ? ಮರ್ಮಭೇದಕವಾಗು ವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದಾಗ ದ್ರೋಣನು "ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ. ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು; ಆದುದರಿಂದ ಸ್ಪಷ್ಟವಾಗಿ ಸಂದೇಹವಿಲ್ಲದೆ ಐಶ್ವರ್ಯವು (ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ತಿಳಿದೆನು" ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:** ಸಮುದ್ರಮಥನ ಕಾಲದಲ್ಲಿ ಐಶ್ವರ್ಯ(ಲಕ್ಷ್ಮಿ) ಮತ್ತು ಕಳ್ಳು (ಸುರಪಾನ) ಇವೆರಡೂ ಹುಟ್ಟಿದವು. ಆ ಘಟನೆಯನ್ನು ದ್ರೋಣನ ಮೂಲಕ ಮಹಾಕವಿ ಪಂಪನು ದ್ರುಪದನ ಐಶ್ವರ್ಯ ಮದಕ್ಕೆ ಅನ್ವಯ ಮಾಡಿ ಹೇಳಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

**5. "ನೊಳವಿಂಗೆ ತಪ್ಪೆ ವರಂ"**
**ಆಯ್ಕೆ:** ಈ ವಾಕ್ಯವನ್ನು **'ಮಹಾಕವಿ ಪಂಪ'** ಬರೆದ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತೆನೇ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ದ್ರುಪದನು ಹೀಯಾಳಿಸಿದಾಗ ಕೋಪಗೊಂಡ ದ್ರೋಣನು ದ್ರುಪದನನ್ನು ಕುರಿತು "ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಸುಮ್ಮನೆ ಮೀಸೆ ಹೊತ್ತಿರುವೆನೆ (ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?) "ಎಂದು ಪ್ರತಿಜ್ಞೆಯನ್ನು ಮಾಡಿದ ಸಂದರ್ಭವಾಗಿದೆ.

**ಸ್ವಾರಸ್ಯ :** 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬ ಗಾದೆಯಂತೆ ವ್ಯಕ್ತಿಯ ಯೋಗ್ಯತೆಗೆ ತಕ್ಕಂತೆ ಗುಣ–ನಡತೆ ಅಭಿರುಚಿಗಳಿರುತ್ತವೆ. ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ

## ಭಾಷಾ ಚಟುವಟಿಕೆ

**1. ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿಯ ಹೆಸರಿಸಿ.**
ವಲ್ಕಲಾವೃತ, ದ್ರವ್ಯಾರ್ಥಿ, ನಿಮ್ಮರಸ, ಮದೋನ್ಮತ್ತ, ಕಳ್ಗುಡಿ.

| | | | |
|---|---|---|---|
| **ವಲ್ಕಲಾವೃತ** | = ವಲ್ಕಲ | + ಆವೃತ | – **ಸವರ್ಣದೀರ್ಘ ಸಂಧಿ** |
| **ದ್ರವ್ಯಾರ್ಥಿ** | = ದ್ರವ್ಯ | + ಅರ್ಥಿ | – **ಸವರ್ಣದೀರ್ಘ ಸಂಧಿ** |
| **ನಿಮ್ಮರಸ** | = ನಿಮ್ಮ | + ಅರಸ | – **ಲೋಪಸಂಧಿ** |
| **ಮದೋನ್ಮತ್ತ** | = ಮದ | + ಉನ್ಮತ್ತ | – **ಗುಣಸಂಧಿ** |
| **ಕಳ್ಗುಡಿ** | = ಕಳ್ | + ಕುಡಿ | – **ಆದೇಶ ಸಂಧಿ** |

**2. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರನ್ನು ತಿಳಿಸಿ.**
ನಾಣಿಲಿ, ದಿವ್ಯಶರಾಳಿ, ಮಹೀಪತಿ, ಕಳ್ಗುಡಿದ

| | | | |
|---|---|---|---|
| **ನಾಣಿಲಿ** | = | ನಾಣ್ ಇಲ್ಲದವನು ಆವನೋ ಅವನು–ನಾಚಿಕೆ ಇಲ್ಲದವ | **– ಬಹುವ್ರೀಹಿ ಸಮಾಸ** |
| **ದಿವ್ಯಶರಾಳಿ** | = | ದಿವ್ಯವಾದ + ಶರಾಳಿ | **– ಕರ್ಮಧಾರಯಸಮಾಸ** |
| **ಮಹೀಪತಿ** | = | ಮಹಿಗೆ ಪತಿ ಆವನೋ ಅವನು (ರಾಜ) | **– ಬಹುವ್ರೀಹಿ ಸಮಾಸ** |
| **ಕಳ್ಗುಡಿದ** | = | ಕಳ್ಳನ್ನು + ಕುಡಿದ | **– ಕ್ರಿಯಾ ಸಮಾಸ** |

**3. ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಲಕ್ಷಣದೊಂದಿಗೆ ಸಮನ್ವಯಗೊಳಿಸಿ**
"ನೊಳವಿಂಗೆ ತಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನ ದೊಂದಳವು?"

**ಅಲಂಕಾರ:– ಉಪಮಾಲಂಕಾರ**

**ಉಪಮೇಯ :–** ದ್ರುಪದನ ಅಳವು(ಪರಾಕ್ರಮ)

**ಉಪಮಾನ :–** ಕಸದ ತಿಪ್ಪೆಯಲ್ಲಿರುವ ನೊಣ

**ಉಪಮಾ ವಾಚಕ :–** ಎಂಬವೊಲ್

**ಸಮಾನ ಧರ್ಮ:–** ಸ್ಪಷ್ಟವಾಗಿಲ್ಲ

**ಸಮನ್ವಯ:–** ಇಲ್ಲಿ ದ್ರುಪದನ ಅಳವು(ಪರಾಕ್ರಮ) ಎಂಬ ಉಪಮೇಯವನ್ನು, ಉಪಮಾನವಾದ ಕಸದ ತಿಪ್ಪೆಯಲ್ಲಿರುವ ನೊಣಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ:–** ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು **'ಉಪಮಾಲಂಕಾರ'**

**4. ಕೊಟ್ಟಿರುವ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ**

| 4 | 4 | 4 | = 12 |
|---|---|---|---|
| – – | ∪ – ∪ | ∪ ∪ – | |
| ಅಂತೆಂ | ಬನಾರ್ಗೆ | ಪಿರಿದುಂ | |

| 4 | 4 | 4 | 4 | 4 | = 20 |
|---|---|---|---|---|---|
| – ∪∪ | – – | ∪ – ∪ | – – | ∪ ∪ – | |
| ಭ್ರಾಂತುದ | ಲೇಂ ದ್ರೋ | ಣನೆಂಬ | ನೇಂ ಪಾ | ರ್ವನೆ ಪೇ | |

**ಛಂದಸ್ಸು– ಕಂದ ಪದ್ಯ**

---

ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪∪∪ | ∪– ∪ | –∪ ∪ | ∪ – ∪ | ∪ – ∪ | ∪– ∪ | –∪ – |
| ಖಳನೊ | ಳವಿಂಗೆ | ಕುಪ್ಪೆ ವ | ರಮೆಂಬ | ವೊಲಾಂಬ | ರಮುಂಟೆ | ನಿನ್ನದೊಂ |

**ಛಂದಸ್ಸು – ಚಂಪಕ ಮಾಲಾ ವೃತ್ತ.**

**5. ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

| | |
|---|---|
| ಅಂತೆಂಬನಾರ್ಗೆ **ಪಿರಿದುಂ**<br>**ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ**<br>**ಳೆಂತೆನಗೆ ಕೆಳೆಯನೇ ನೂಂ**<br>**ಕಂತಪ್ಪನನಱಿಯೆನೆಂದು ಸಭೆಯೊಳ್** ನುಡಿದಂ | ಒಡವೆಯನರ್ಥಿಗಿತ್ತೆ **ನವನೀತಳಮಂ ಗುರುಗಿತ್ತೆನೀಗಳೊಂ**<br>**ದಡೆಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ**<br>**ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ**<br>**ಲ್ಲೊಡಮೆ ಸಮಂತು ಪೇೞುವರೊಳಾವುದನೀವುದೊ** ಕುಂಭಸಂಭವಂ |